# ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 158 ಟಿಎನ್‌ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ:03-07-2020

## ಆದೇಶ

ಭಾರತ ಸರ್ಕಾರದ ಗೃಹ ಮಂತ್ರಾಲಯದ ಆದೇಶ ಸಂಖ್ಯೆ: 40-3/ 2020- ಡಿಎಂ-I (ಎ) ದಿನಾಂಕ: 29.06.2020ರಲ್ಲಿ ಕಂಟೈನ್‌ಮೆಂಟ್ ವಲಯಗಳನ್ನು ಹೊರತುಪಡಿಸಿದ ಪ್ರದೇಶಗಳಲ್ಲಿ ಸರಿಹೊಂದುವ (calibrated) ರೀತಿಯಲ್ಲಿ ಹೆಚ್ಚು ಕಾರ್ಯಚಟುವಟಿಕೆಗಳನ್ನು ಮರು ಪ್ರಾರಂಭಿಸಲು ಹಾಗೂ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ನಿರ್ದೇಶನಗಳ ಆಧಾರದ ಮೇಲೆ ದಿನಾಂಕ: 31.07.2020ರವರೆಗೆ ಕಂಟೈನ್‌ಮೆಂಟ್ ವಲಯದಲ್ಲಿ ಲಾಕ್‌ಡೌನ್ ಅನ್ನು ವಿಸ್ತರಿಸಲು ಅನ್‌ಲಾಕ್-2 ಮಾರ್ಗಸೂಚಿಗಳನ್ನು ಹೊರಡಿಸಿದೆ ತತ್ಪರಿಣಾಮವಾಗಿ, ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಕಂಇ 158 ಟಿಎನ್‌ಆರ್ 2020, ದಿನಾಂಕ: 30.06.2020ರ ಮುಖಾಂತರ ಅನ್‌ಲಾಕ್-2 ರ ನೂತನ ಮಾರ್ಗಸೂಚಿಗಳನ್ನು ಹೊರಡಿಸಿದೆ. ಅದು ದಿನಾಂಕ: 31.07.2020ರವರೆಗೆ ಜಾರಿಯಲ್ಲಿರುತ್ತದೆ.

ಅಂತರ್ ರಾಜ್ಯ ಮತ್ತು ರಾಜ್ಯದೊಳಗಿನ ವ್ಯಕ್ತಿಗಳ ಚಲನವಲನದ ಜೊತೆಗೆ ಹೆಚ್ಚು ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿ, ರಾಜ್ಯದಲ್ಲಿ ಕೋವಿಡ್ -19ರ ಹರಡುವಿಕೆಯನ್ನು ನಿಗ್ರಹಿಸಲು ಕಾರ್ಯತಂತ್ರವನ್ನು ಒಳಗೊಂಡಿದೆ.

ವಿಪತ್ತು ನಿರ್ವಹಣಾ ಅಧಿನಿಯಮ, 2005ರ ಸೆಕ್ಷನ್ 24(ಇ), (ಎಫ್) ಹಾಗೂ (ಎಲ್)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಈ ಕೆಳಗೆ ಸಹಿ ಮಾಡಿರುವ ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷನಾದ ನಾನು ಈ ಮೂಲಕ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮೀಣ ಜಿಲ್ಲಾಧಿಕಾರಿಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಇವರಿಗೆ ಕೋವಿಡ್-19ರ ಕಂಟೈನ್‌ಮೆಂಟ್‌ಗಾಗಿ ಸಾರ್ವಜನಿಕರ ಆರೋಗ್ಯ ಸುರಕ್ಷತಾ ಕ್ರಮಗಳ ಕುರಿತು ಕಾರ್ಯ ನಿರ್ವಹಿಸುವುದಕ್ಕಾಗಿ ಅನುಬಂಧದಲ್ಲಿ ಸೂಚಿಸಿರುವಂತೆ ಕೂಡಲೇ 14 ಕಾರ್ಯತಂಡಗಳನ್ನು ರಚಿಸಿ ಆದೇಶಿಸಿರುತ್ತೇನೆ.

ಈ ಕಾರ್ಯತಂಡಗಳು ಸಂಘಟಿತ ಹಾಗೂ ಸಮನ್ವಯ ರೀತಿಯಲ್ಲಿ ತಮಗೆ ವಹಿಸಿದ ಕಾರ್ಯವನ್ನು ಅನುಷ್ಠಾನಗೊಳಿಸತಕ್ಕದ್ದು. ಜಿಲ್ಲಾಧಿಕಾರಿಗಳು ನಿಯಮಿತವಾಗಿ ಪ್ರತಿ ತಂಡದ ಕಾರ್ಯನಿರ್ವಹಣೆಯನ್ನು ಸಮಗ್ರವಾಗಿ ಪರಿಶೀಲಿಸತಕ್ಕದ್ದು ಹಾಗೂ ಕಾರ್ಯಸಾಧನೆಗೆ ಸಾಧ್ಯವಾದ ಎಲ್ಲಾ ಅಗತ್ಯ ನೆರವನ್ನು ಒದಗಿಸತಕ್ಕದ್ದು.

(ಟಿ. ಎಂ. ವಿಜಯ್ ಭಾಸ್ಕರ್)
ಮುಖ್ಯ ಕಾರ್ಯದರ್ಶಿ ಹಾಗೂ ಅಧ್ಯಕ್ಷರು,
ರಾಜ್ಯ ಕಾರ್ಯಕಾರಿ ಸಮಿತಿ, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು.

ಪ್ರತಿ:

ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ.
(ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ)

**ಆದೇಶ ಸಂ. ಆರ್‌ಡಿ 158 ಟಿಎನ್‌ಆರ್ 2020, ದಿನಾಂಕ: 03.07.2020ಕ್ಕೆ ಅನುಬಂಧ**

**ಜಿಲ್ಲೆಗಳಲ್ಲಿ ಕೋವಿಡ್-19 ಅನ್ನು ನಿಗ್ರಹಿಸುವುದಕ್ಕಾಗಿ ಜಿಲ್ಲಾ ಮಟ್ಟದ ಕಣ್ಗಾವಲು ಮತ್ತು ಸಾರ್ವಜನಿಕ ಆರೋಗ್ಯ ಸುರಕ್ಷತಾ ಕ್ರಮಗಳ ಕಾರ್ಯತಂಡಗಳು**

| ಕ್ರಮ ಸಂಖ್ಯೆ | ಕಾರ್ಯ | ಹೊಣೆಗಾರಿಕೆ ಕ್ಷೇತ್ರ | ಕಾರ್ಯ ನಾಯಕ (ರು) | ಕಾರ್ಯ ಸದಸ್ಯರು |
|---|---|---|---|---|
| 1 | ಕೋವಿಡ್ 19 ಸೋಂಕಿತ ವ್ಯಕ್ತಿಗಳನ್ನು ಸಿಸಿಸಿ/ ಡಿಸಿಎಚ್‌ಸಿ/ ಡಿಸಿಎಚ್‌ಗಳಿಗೆ ಸ್ಥಳಾಂತರ | • ರೋಗಿಗಳನ್ನು ಸ್ಥಳಾಂತರಿಸಲು ಸಾಕಷ್ಟು ಸಂಖ್ಯೆಯ ಆಂಬುಲೆನ್ಸ್ ಮತ್ತು ಅರೆವೈದ್ಯಕೀಯ ಸಿಬ್ಬಂದಿಗಳ ಲಭ್ಯತೆಯನ್ನು ಖಾತರಿಪಡಿಕೊಳ್ಳುವುದು.<br>• ಐಸಿಎಂಆರ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ರೋಗಿಯ ಸರಿಯಾದ ಮೊಬೈಲ್ ಸಂಖ್ಯೆ ಮತ್ತು ವಿಳಾಸವನ್ನು ಖಚಿತಪಡಿಸಿಕೊಳ್ಳುವುದು.<br>• ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾರ್ಗಸೂಚಿಗಳ ಅನ್ವಯ 3 ಗಂಟೆಗಳ ಒಳಗಾಗಿ ರೋಗಿಗಳನ್ನು ಚಿಕಿತ್ಸಾ ನಿರ್ಧರಣಾ ಕೇಂದ್ರಗಳಿಗೆ ಸ್ಥಳಾಂತರಿಸಿ ತದನಂತರ ಸಿಸಿಸಿ/ ಡಿಸಿಎಚ್‌ಸಿ/ಡಿಸಿಎಚ್‌ಗಳಿಗೆ ಸ್ಥಳಾಂತರಿಸುವುದು.<br>• ಕಂಟೈನ್‌ಮೆಂಟ್ ವಲಯಗಳನ್ನು ಗುರುತಿಸಲು ಸರಿಯಾದ ಮೊಬೈಲ್ ಸಂಖ್ಯೆ ಮತ್ತು ವಿಳಾಸವನ್ನು ಪೊಲೀಸ್ ಮತ್ತು ಕಣ್ಗಾವಲು ಅಧಿಕಾರಿಗಳಿಗೆ ತಿಳಿಸುವುದು.<br>• ಸಂಪರ್ಕ ಪತ್ತೆ ತಂಡಕ್ಕೆ ಸಂಪರ್ಕ ಪತ್ತೆ ಕಾರ್ಯವನ್ನು ನಿರ್ವಹಿಸುವುದಕ್ಕೆ ಅನುವಾಗುವಂತೆ ರೋಗಿಯ ವಿವರಗಳನ್ನು ತಿಳಿಸುವುದು. | | |
| 2 | ಕೋವಿಡ್ ಆರೈಕೆ ಕೇಂದ್ರಗಳು (ಸಿಸಿಸಿ) | • ಅತ್ಯಗತ್ಯತೆಯನ್ನು ಸಿದ್ಧಪಡಿಸುವಿಕೆಗೆ (ಹಾಸಿಗೆಗಳು, ಉಪಕರಣಗಳು, ವೈದ್ಯಕೀಯ, ಅರೆವೈದ್ಯಕೀಯ ಮತ್ತು ಪೂರಕ ಸಿಬ್ಬಂದಿ, ವಾಹನ ಸೌಲಭ್ಯ, ಆಹಾರ, ಸ್ಯಾನಿಟೈಸೇಷನ್) ಮುಂಬರುವ ಪರಿಸ್ಥಿತಿಗೆ ಅನುಗುಣವಾಗಿ ಸಾಮರ್ಥ್ಯವನ್ನು ಸಿದ್ಧಪಡಿಸುವುದು. | | |

ಕಮಲಿ

| | | | | |
|---|---|---|---|---|
| | | • ಮಾನವ ಸಂಪನ್ಮೂಲಗಳನ್ನು ಗುರುತಿಸುವುದು ಮತ್ತು ತರಬೇತುಗೊಳಿಸುವುದು.<br>• ಅವಶ್ಯಕ ಕೇಂದ್ರಗಳನ್ನು ಗುರುತಿಸುವಿಕೆ (ಸಮುದಾಯ ಭವನ, ವಿದ್ಯಾರ್ಥಿ ನಿಲಯಗಳು, ಸ್ಟೇಡಿಯಂಗಳು ಇತ್ಯಾದಿ) | | |
| 3 | **ಸಮರ್ಪಿತ ಕೋವಿಡ್ 19 ಆರೋಗ್ಯ ಕೇಂದ್ರ ಮತ್ತು ಕೋವಿಡ್ 19 ಆಸ್ಪತ್ರೆಗಳು (ಡಿಸಿಎಚ್‌ಸಿ/ಡಿಸಿಎಚ್)** | • ನಿರೀಕ್ಷಿತ ಮಟ್ಟದ ಆಧಾರದ ಮೇಲೆ ಸಾಮರ್ಥ್ಯವನ್ನು ಹೆಚ್ಚಿಸುವುದು.<br>• ಕಡ್ಡಾಯವಾಗಿ ಆಸ್ಪತ್ರೆ ನಿರ್ವಹಣೆ ಮತ್ತು ಮಾನವ ಸಂಪನ್ಮೂಲ ತಂಡವನ್ನು ನಿಯೋಜಿಸುವುದು.<br>• ಮಾನವ ಸಂಪನ್ಮೂಲಗಳನ್ನು ಗುರುತಿಸುವುದು ಮತ್ತು ತರಬೇತಿ ನೀಡುವುದು.<br>• ನೂತನ ಸೌಲಭ್ಯಗಳನ್ನು ಗುರುತಿಸುವುದು. | | |
| 4 | **ಸಂಪರ್ಕ ಪತ್ತೆ ಹಚ್ಚುವಿಕೆ** | • ಕರೋನಾ ಪಾಸಿಟೀವ್ ವ್ಯಕ್ತಿಯ ಎಲ್ಲಾ ಸಂಪರ್ಕಗಳನ್ನು ಶೀಘ್ರವಾಗಿ ಪತ್ತೆ ಹಚ್ಚುವುದು.<br>• 24 ಗಂಟೆಗಳ ಒಳಗಾಗಿ ಎಲ್ಲಾ ಅತಿ ಹೆಚ್ಚಿನ ಅಪಾಯದ ಸಂಪರ್ಕಗಳನ್ನು ಗುರುತಿಸುವುದು.<br>• ಕರೋನಾ ಸೋಂಕಿತ ವ್ಯಕ್ತಿಯ ಮೊಬೈಲ್ ಸಂಖ್ಯೆಯನ್ನು ಖಚಿತಪಡಿಸಿಕೊಳ್ಳುವುದು.<br>• ಸಂಪರ್ಕ ಪತ್ತೆಗೆ ಸಂಬಂಧಿಸಿದ ಮಾಹಿತಿಯನ್ನು ಸಂಬಂಧಪಟ್ಟ ಆಪ್/ ಪೋರ್ಟಲ್‌ಗಳಲ್ಲಿ ಸಕಾಲದಲ್ಲಿ ಅಪ್‌ಡೇಟ್ ಮಾಡುವುದು.<br>• ಪತ್ತೆ ಹಚ್ಚುವುದಕ್ಕಾಗಿ ಮಾಹಿತಿ ತಂತ್ರಜ್ಞಾನದ ಪರಿಣಾಮಕಾರಿ ಬಳಕೆ. | | |
| 5 | **ಪರೀಕ್ಷೆ** | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾರ್ಗಸೂಚಿಗಳ ಪ್ರಕಾರ ತೀವ್ರವಾದ ಪರೀಕ್ಷೆ ಮಾಡುವುದು:<br>• ಪ್ರಾಥಮಿಕ ಸಂಪರ್ಕಗಳು<br>• ವೈದ್ಯರು ನಿರ್ಧರಿಸಿದ ಎಲ್ಲಾ ಶಂಕಿತ ಪ್ರಕರಣಗಳು.<br>• ಎಲ್ಲಾ ಎಸ್‌ಎಆರ್‌ಐ ಪ್ರಕರಣಗಳು. | | |

| | | | | |
|---|---|---|---|---|
| | | • ಎಲ್ಲಾ ಐಎಲ್ಐ ಪ್ರಕರಣಗಳು.<br>• ಹೆಚ್ಚು ಸಾರ್ವಜನಿಕ ಸಂಪರ್ಕ ಹೊಂದಿರುವ ವ್ಯಕ್ತಿಗಳು (ಪೊಲೀಸ್, ವಾಚ್‌ಮೆನ್, ತರಕಾರಿ ವ್ಯಾಪಾರಿಗಳು, ಹೋಟೆಲ್ ಕ್ಯಾಶಿಯರ್‌ಗಳು, ಇತ್ಯಾದಿ)<br>• ಶೀಘ್ರ ಫಲಿತಾಂಶ ಬರುವಂತೆ ನೋಡಿಕೊಳ್ಳಲು ಪ್ರಯೋಗಾಲಯಗಳ ಪೂರ್ಣ ಪ್ರಮಾಣದ ಬಳಕೆ. | | |
| 6 | **ಕಂಟೈನ್‌ಮೆಂಟ್ ವಲಯಗಳು** | • ಕಟ್ಟುನಿಟ್ಟಿನ ಪರಿಧಿಯ ನಿಯಂತ್ರಣ<br>• ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾರ್ಗಸೂಚಿಗಳ ಪ್ರಕಾರ ಕಂಟೈನ್‌ಮೆಂಟ್ ವಲಯಗಳು ಮತ್ತು ಬಫರ್ ವಲಯಗಳಲ್ಲಿ ತೀವ್ರತರವಾದ ನಿಗಾವಣೆ | | |
| 7 | **ಕ್ವಾರಂಟೈನ್ ನಿಗಾವಣೆ (ಹೋಂ ಕ್ವಾರಂಟೈನ್ - ಎಚ್‌ಕ್ಯೂ) ಮತ್ತು ಸಿಕ್ಯೂಎಎಸ್ ಹಾಗೂ ಆರೋಗ್ಯ ಸೇತು (ಎಎಸ್)** | • ಸಮುದಾಯ, ಭೂತ್ ಮಟ್ಟದ ತಂಡಗಳು, ವಾರ್ಡ್ ಮಟ್ಟದ ಮತ್ತು ಗ್ರಾಮ ಪಂಚಾಯತ್ ಮಟ್ಟದ ವಿಪತ್ತು ನಿರ್ವಹಣಾ ಸಮಿತಿಗಳು / ಕಾರ್ಯಪಡೆಗಳನ್ನು ತೊಡಗಿಸಿಕೊಳ್ಳುವ ಮೂಲಕ ಕಟ್ಟುನಿಟ್ಟಿನ ಹೋಂ ಕ್ವಾರೆಂಟೈನ್ ಅನ್ನು ಖಚಿತಪಡಿಸುವುದು.<br>• ಸಿಕ್ಯೂಎಎಸ್ ಉಲ್ಲಂಘನೆಯಾದ ಸಂದರ್ಭದಲ್ಲಿ ಅದೇ ದಿನದಂದು ಹೋಂ ಕ್ವಾರೆಂಟೈನ್ ವ್ಯಕ್ತಿಗಳನ್ನು ಸಂಪರ್ಕಿಸುವುದು.<br>• ಉಲ್ಲಂಘನೆಯು ಮರುಕಳಿಸಿದ ಸಂದರ್ಭದಲ್ಲಿ ಸಾಂಸ್ಥಿಕ ಕ್ವಾರೆಂಟೈನ್ ಗೆ ಸ್ಥಳಾಂತರಿಸುವುದು, ಪ್ರಥಮ ವರ್ತಮಾನ ವರದಿ ದಾಖಲಿಸುವುದು ಮೊದಲಾದಂತಹ ದಂಡನೀಯ ಉಪಬಂಧಗಳನ್ನು ಜಾರಿಗೊಳಿಸುವುದು.<br>• ಹೋಂ ಕ್ವಾರೆಂಟೈನ್‌ನಲ್ಲಿರುವ ವ್ಯಕ್ತಿಯನ್ನು ಆಗಾಗ್ಗೆ ಸಂಪರ್ಕಿಸುವುದು.<br>• ಜಿಲ್ಲಾ ಆರೋಗ್ಯ ಸಹಾಯವಾಣಿ ಸಂಖ್ಯೆಯಿಂದ ಎಲ್ಲಾ ಹೋಂ ಕ್ವಾರೆಂಟೀನ್ ನಲ್ಲಿರುವ ವ್ಯಕ್ತಿಗಳಿಗೆ ಕರೆ ಮಾಡುವುದು.<br>• ಆರೋಗ್ಯ ಸೇತು ಆ್ಯಪ್ ನಿಂದ ಶಂಕಿತ/ ಅಪಾಯದ ಹಂತದಲ್ಲಿರುವ | | |

| | | | | |
|---|---|---|---|---|
| | | ಪ್ರಕರಣಗಳನ್ನು ಅನುಸರಣೆ ಮಾಡುವುದು.<br>● ಪ್ರಸ್ತುತ/ ಸಂಭಾವ್ಯ ಹಾಟ್‌ಸ್ಪಾಟ್‌ಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಾರ್ವಜನಿಕರಿಗೆ ಪ್ರಚಾರ ಮಾಡುವುದು. | | |
| 8 | ಸಾಮಾಜಿಕ ಅಂತರ (ಮುಖ ಗವಸು ಧರಿಸುವುದು, ಸಾಮಾಜಿಕ ಅಂತರ ಕಾಯ್ದುವುದು, ಬೃಹತ್ ಗುಂಪುಗೂಡುವಿಕೆಯನ್ನು ತಡೆಯುವುದು, ಉಗಿಯುವುದನ್ನು ತಡೆಯುವುದು, ಇತ್ಯಾದಿ) | ● ಮಾರುಕಟ್ಟೆಗಳು, ಬಸ್ ನಿಲ್ದಾಣಗಳು, ಎಪಿಎಂಸಿ, ಇತ್ಯಾದಿ ಅಂತಹ ಜನನಿಬಿಡ ಪ್ರದೇಶಗಳೆಡೆ ಹೆಚ್ಚು ಗಮನ ನೀಡುವುದು.<br>● ಇದರ ಅನುಪಾಲನೆಯಲ್ಲಿ ವಾರ್ಡ್ ಮಟ್ಟದ ಹಾಗೂ ಗ್ರಾಮ ಪಂಚಾಯತ್ ಮಟ್ಟದ ವಿಪತ್ತು ನಿರ್ವಹಣಾ ಸಮಿತಿಗಳು/ ಕಾರ್ಯಪಡೆಗಳು, ಎಲ್ಲಾ ಹಿತಾಸಕ್ತಿದಾರರು ಮತ್ತು ಸಮುದಾಯವನ್ನು ತೊಡಗಿಸಿಕೊಳ್ಳುವುದು.<br>● ಉಲ್ಲಂಘನೆಯ ಸಂದರ್ಭದಲ್ಲಿ ದಂಡನೀಯ ಕ್ರಮ ಕೈಗೊಳ್ಳುವುದು.<br>● ಆಟೋಗಳು ಮತ್ತು ಇತರೆ ವಾಹನಗಳ ಮುಖಾಂತರ ಸಂಚಾರಿ ಸಾರ್ವಜನಿಕ ಪ್ರಕಟಣೆ ವ್ಯವಸ್ಥೆಯನ್ನು ಬಳಸುವುದು. | | |
| 9 | ಖಾಸಗಿ ಮತ್ತು ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಮತ್ತು ಜ್ವರ ಚಿಕಿತ್ಸಾಲಯಗಳಿಂದ (ಕೆಪಿಎಂಇ ಮತ್ತು ಔಷಧ ಕೇಂದ್ರಗಳು) ಐಎಲ್‌ಐ / ಎಸ್‌ಎಆರ್‌ಐ ಪ್ರಕರಣಗಳು | ● ಕೆಪಿಎಂಇ ಮತ್ತು ಫಾರ್ಮಸಿಗಳು ಶೇಕಡ 100ರಷ್ಟು ಎಲ್ಲಾ ಐಎಲ್‌ಐ/ ಎಸ್‌ಎಆರ್‌ಐ ಪ್ರಕರಣಗಳನ್ನು ವರದಿ ಮಾಡುವಂತೆ ಖಚಿತಪಡಿಸಿಕೊಳ್ಳುವುದು.<br>● ಪರೀಕ್ಷಾ ತಂಡಗಳೊಂದಿಗೆ ಸಮನ್ವಯತೆ ಮತ್ತು ಪ್ರಕರಣಗಳ ತಡೆರಹಿತ ಮಾಹಿತಿ ವಿನಿಮಯ.<br>● ಔಷಧ ಕೇಂದ್ರಗಳು ಮತ್ತು ಸ್ವ್ಯಾಬ್ ಸಂಗ್ರಹಣೆ ಕಾರ್ಯನಿರ್ವಹಣೆಯ ಬಗ್ಗೆ ಮೇಲ್ವಿಚಾರಣೆ.<br>● ಅತ್ಯಂತ ಅಪಾಯದ ಪ್ರಕರಣಗಳ ವೈದ್ಯಕೀಯ ಸ್ಥಿತಿಗತಿಗಳ ಮೇಲ್ವಿಚಾರಣೆ ಮಾಡುವುದು. | | |
| 10 | ಜಿಲ್ಲಾ ನಿಯಂತ್ರಣ ಕೊಠಡಿ (ಆರೋಗ್ಯ, ಪೊಲೀಸ್ ಮತ್ತು ಕಂದಾಯ) | ● ಸ್ಟೇಟ್ ವಾರ್ ರೂಂ ಮತ್ತು ಜಿಲ್ಲಾ ನಿಯಂತ್ರಣ ಕೊಠಡಿಯ ನಡುವೆ ತಡೆರಹಿತ ಮಾಹಿತಿಯನ್ನು ವಿನಿಮಯ ಮಾಡುವುದು.<br>● ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮಸಾಧ್ಯ ಮಾಹಿತಿಯನ್ನು ಮತ್ತು | | |

| | | | | |
|---|---|---|---|---|
| | | ಸಾರ್ವಜನಿಕರಿಗೆ ಅಂಕಿಅಂಶಗಳ ಮಾಹಿತಿಯನ್ನು ಸಕಾಲದಲ್ಲಿ ಪ್ರಸಾರ ಮಾಡುವುದು (ಪತ್ರಿಕಾ ಪ್ರಕಟಣೆ). | | |
| **11** | **ಮೃತ ದೇಹದ ನಿರ್ವಹಣೆ** | • ಮೃತ ದೇಹಗಳ ಅಂತ್ಯಕ್ರಿಯೆಯನ್ನು ಮಾಡುವ ಸಂದರ್ಭದಲ್ಲಿ ಎಲ್ಲಾ ಗೌರವಯುತ ಶಿಷ್ಟಾಚಾರ ಪಾಲನೆ ಬಗ್ಗೆ ಖಚಿತಪಡಿಸುಕೊಳ್ಳುವುದು.<br>• ಮೃತ ದೇಹಗಳ ಸಾಗಣೆಗಾಗಿ ವಾಹನಗಳ ವ್ಯವಸ್ಥೆಗಳನ್ನು ಮಾಡುವುದು.<br>• ಈ ಕಾರ್ಯವಿಧಾನದ ಬಗ್ಗೆ ಸಂಬಂಧಿಕರಿಗೆ ಮಾಹಿತಿ ನೀಡುವುದು.<br>• ಮೃತ್ಯು ಆಡಿಟ್ ವರದಿಯನ್ನು ಆರೋಗ್ಯ ಇಲಾಖೆ ಹಾಗೂ ಉಪ ಕುಲಪತಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (RGUHS) ರವರಿಗೆ ಕಳುಹಿಸುವುದು | | |
| **12** | **ರಸ್ತೆ ಮತ್ತು ರೈಲಿನ ಮೂಲಕ ಅಂತರ್ ರಾಜ್ಯ ಪ್ರಯಾಣಿಕರು (ಅಂತ್‌ರ್ - ರಾಜ್ಯ ಗಡಿಯನ್ನು ಹಂಚಿಕೊಳ್ಳುವ ಜಿಲ್ಲೆಗಳಿಗೆ ಮತ್ತು ಪ್ರಮುಖವಾದ ರೈಲ್ವೇ ನಿಲ್ದಾಣ ಹೊಂದಿರುವ ಜಿಲ್ಲೆಗಳಿಗೆ)** | • ಅಂತರ್-ಜಿಲ್ಲಾ ಚೆಕ್‌ಪೋಸ್ಟ್ (ಗಡಿ ಅನುಕೂಲ ಕಲ್ಪಿಸುವ ಕೇಂದ್ರಗಳು) ಮತ್ತು ಜಿಲ್ಲಾ ಅನುಕೂಲ ಕಲ್ಪಿಸುವ ಕೇಂದ್ರಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮತ್ತು ಒಳಬರುವ ವಾಹನಗಳ ಸಾಮರ್ಥ್ಯದ ನಿರ್ಧಾರಣೆ.<br>• ನೆರೆಹೊರೆಯ ಜಿಲ್ಲೆಗಳೊಂದಿಗೆ ಸಮನ್ವಯ ಸಾಧಿಸುವುದು<br>• ಅಂತರ್-ರಾಜ್ಯ ಗಡಿ ಮತ್ತು ಜಿಲ್ಲಾ ಅನುಕೂಲ ಕಲ್ಪಿಸುವ ಕೇಂದ್ರಗಳಿಗೆ ರೈಲುಗಳಿಂದ ಪ್ರವೇಶಿಸುವ ಮತ್ತು ಇಳಿಯುವ ವ್ಯಕ್ತಿಗಳನ್ನು ಸೇವಾ ಸಿಂಧು ಪೋರ್ಟ್‌ಲ್‌ನಲ್ಲಿ ನೋಂದಾಯಿಸಿಕೊಳ್ಳುವಂತೆ ಹಾಗೂ ಐಎಸ್‌ಟಿ ಆಪ್‌ನ ಮೂಲಕ ದೃಢೀಕರಿಸಿಕೊಳ್ಳುವಂತೆ ನೋಡಿಕೊಳ್ಳುವುದು.<br>• ಸಂಪನ್ಮೂಲಗಳನ್ನು ದಕ್ಷವಾಗಿ ನಿಯುಕ್ತಿಗೊಳಿಸುವ ಮೂಲಕ ಚೆಕ್‌ಪೋಸ್ಟ್ ಹಾಗೂ ರೈಲ್ವೆ ನಿಲ್ದಾಣಗಳ ನಿರೀಕ್ಷಣಾ ಸಮಯವನ್ನು ತಗ್ಗಿಸುವುದು.<br>• ಸೇವಾ ಸಿಂಧುವಿನಲ್ಲಿ ನೋಂದಣಿ ಮಾಡಿಕೊಳ್ಳುವ ಬಗ್ಗೆ ಬಸ್‌ಗಳು ಮತ್ತು ರೈಲುಗಳಲ್ಲಿ ಪ್ರಕಟಣೆ ಮಾಡುವುದು. | | |

ಕವಿತ

| | | | | |
|---|---|---|---|---|
| 13 | ವಿಮಾನಯಾನ ಮತ್ತು ನೌಕಯಾನದ ಮೂಲಕ ಪ್ರಯಾಣಿಸುವ ಅಂತರ್ ರಾಜ್ಯ ಪ್ರಯಾಣಿಕರು (ವಿಮಾನ ನಿಲ್ದಾಣ ಮತ್ತು ಹಡಗು ನಿಲ್ದಾಣಗಳನ್ನು ಹೊಂದಿರುವ ದಕ್ಷಿಣ ಕನ್ನಡ ಮತ್ತು ಇತರ ಜಿಲ್ಲೆಗಳು) | • ವಿಮಾನಗಳು ಮತ್ತು ಹಡಗುಗಳು / ದೋಣಿಗಳಿಂದ ಬಂದಿಳಿಯುವ ವ್ಯಕ್ತಿಗಳು ಕಡ್ಡಾಯವಾಗಿ ಸೇವಾ ಸಿಂಧು ಆಪ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ ಎಂಬುದನ್ನು ಐಎಸ್‌ಟಿ ಆಪ್ ಮೂಲಕ ದೃಢಪಡಿಸಿಕೊಳ್ಳುವುದು. | | |
| 14 | ಮಾತೃ ಮತ್ತು ಮಗುವಿನ ಆರೋಗ್ಯ ಸೇವಾ ಕಾರ್ಯಕ್ರಮ | • ಪ್ರಸವ ಪೂರ್ವ ಮತ್ತು ಪ್ರಸವೋತ್ತರ ಆರೈಕೆಯನ್ನು ಸಕಾಲದಲ್ಲಿ ಮಾಡುವುದು.<br>• ಸೋಂಕು ತಡೆ ಕಾರ್ಯಕ್ರಮ<br>• ಜಿಲ್ಲಾ ಆರೋಗ್ಯ ನಿಯಂತ್ರಣ ಕೊಠಡಿಯಿಂದ ಮೇಲ್ವಿಚಾರಣೆ | | |

(ಟಿ. ಎಂ. ವಿಜಯ್ ಭಾಸ್ಕರ್)

ಮುಖ್ಯ ಕಾರ್ಯದರ್ಶಿ ಹಾಗೂ ಅಧ್ಯಕ್ಷರು,

ರಾಜ್ಯ ಕಾರ್ಯಕಾರಿ ಸಮಿತಿ, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ